

ಸಕಲೇಶಪುರ.. ಹಾಸನ.. ಗಾರ್ಬೆಜ್ ಸಿಟಿ!




ಒಂದು ಸಿಹಿ ಸುದ್ದಿ.. ಕಣ್ರೀ! ಸಿಹಿ ಅಂದ್ರೆ ಆಗಲ್ಲ, ಸಿಹಿತಿಂಡಿ ಏನೂ ಮಾಡ್ಬೇಡಿ ಅಂತ ನಮ್ಮ ಅಳಿಯ ಕರೆ ಮಾಡಿದ್ದಾರೆ!



ಟಿವಿಯಲ್ಲಿ ಸಿನೇಮಾ ಮಧ್ಯೆ ತುರುಕುವ ಜಾಹೀರಾತುಗಳಿಂದ ಬೇಸತ್ತ ಜನ ಈಗ ಥಿಯೇಟರಿನತ್ತ ಧಾವಿಸ ತೊಡಗಿದ್ದಾರೆ.

ನಿಲ್ಲದ 'ನೀಲಂ' ಪ್ರಭಾವ!



ಅದ್ಯಾವ ಕೆಟ್ಟ ಗಳಿಗೆಯಲ್ಲಿ
ನೀನು ನನ್ನ ಜೀವನದಲ್ಲಿ
'ನೀಲಂ'ದಂತೆ ಬಂದೆಯೋ?




ಹಕ್ಕಿ ಹಾರುತಿದೆ ನೋಡಿದಿರಾ...........



ಭ್ರಷ್ಟಾಚಾರವಿಲ್ಲದ ಒಬ್ಬ ರಾಜಕಾರಣಿಯ ಹೆಸರು ಹೇಳಿ ಅಂತ ಸಾರ್ವಜನಿಕರಿಗೆ ಕ್ವಿಜ್ ಇಟ್ಟಿದ್ದೆವು.. ಆದರೆ ಒಬ್ಬರಿಗೂ ಹೆಸರು ಹೇಳಲು ಸಾಧ್ಯವಾಗಲಿಲ್ಲ...

### ಮಾಹಿತಿಪೂರ್ಣ ಲೇಖನ




'ಸುಧಾ' ನ.15ರ ಮುಖಪುಟ ಲೇಖನ ಗುಡಿಹಳ್ಳಿ ನಾಗರಾಜರ 'ಕಿರು ತೆರೆಯಲ್ಲಿ ಹಾಸ್ಯ ಪಟಾಕಿ' ಟಿವಿ ಧಾರಾವಾಹಿಗಳ ಕುರಿತು ಅಪೂರ್ವ ಮಾಹಿತಿ ನೀಡಿದೆ. ವಾರಪತ್ರಿಕೆಗಳ ಪೈಕಿ 'ಸುಧಾ' ಮಾತ್ರ ಕಿರುತೆರೆಯ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುತ್ತಿದೆ.

–ಸು.ವಿಜಯಲಕ್ಷ್ಮಿ, ಎಚ್.ಎಸ್.ವಿಶ್ವನಾಥ್, ಪಿ.ಗೋವಿಂದರಾಜ್, ಶಿವಮೊಗ್ಗ/ ಪಿ.ವೆಂಕಟ್ರಮಣ ಭಟ್, ಬೆಂಗಳೂರು/ ತಂಬ್ರಹಳ್ಳಿ ರಾಮನಮಲಿ, ಹರಪನಹಳ್ಳಿ

### ಇಂತಹವರೂ ಇದ್ದಾರೆ!

ದಟ್ಟ ಕಾನನದಲ್ಲಿ ಒಬ್ಬಂಟಿ ವಾಸಿ 'ಹೀಗೊಬ್ಬ ಕಾಡಾಡಿ' ಓದಿದಾಗ ಈಗಿನ ಕಾಲದಲ್ಲೂ ಇಂತಹವರು ಇದ್ದಾರಲ್ಲ ಎಂದು ಅಚ್ಚರಿ ಎನಿಸಿತು.

–ತರಂಗಿಣಿ, ತುಮಕೂರು

### ಕ್ಯಾನ್ಸರ್ ರೋಗಿಗೆ ಸಲಹೆ

ಜಿ.ಎಸ್.ಭಟ್ಟರ 'ಶ್ರೀದೇವಿಯ ಅನುಸಂಧಾನ' ಪರಿಚಯ ಲೇಖನದಲ್ಲಿ ಸಾವಿನಂಚಿನಲ್ಲಿರುವ ಕ್ಯಾನ್ಸರ್ ರೋಗಿಗೆ ದಾರಿದೀಪವಾಗುವ ಸಲಹೆಗಳಿವೆ. 'ಸುಧಾ'ದಲ್ಲಿ ನೀಡಿರುವ ಗೋವರ್ಧನ ಅಂಕೋಲೇಕರ್ ಅವರ ದೂರವಾಣಿ ಕರೆಗೆ ಫೋನ್ ಮಾಡಿದಾಗ ಅವರು ತಮ್ಮ 75ನೇ ವಯಸ್ಸಿನಲ್ಲಿ 'ಮೃತ್ಯುಮಿತ್ರ' ಪುಸ್ತಕ ಮುದ್ರಿಸಿ ಉಚಿತವಾಗಿ ಹಂಚುತ್ತಿರುವುದು ಕೇಳಿ, ಅವರ ಸೇವೆ ಸಾರ್ಥಕ ಎನಿಸಿತು.

–ಪ್ರಭುಪ್ರಸಾದ್ ನಡುತೋಟ, ಶೃಂಗೇರಿ/ ನಾರಾಯಣ ಯಾಜಿ, ಶಿರಾಲಿ

### ನಿಸರ್ಗದ ಪ್ರಯೋಜನ

ನೈಸರ್ಗಿಕ ಮೂಲಗಳನ್ನು ಬಳಸಿಕೊಂಡೇ ಮನುಷ್ಯ ಲಾಭ ಪಡೆಯಬಹುದು ಎಂಬುದಕ್ಕೆ ಆಶಾ ಸಂಜೀವ ಗೌರ ಅವರ 'ರವಿ ಕಿರಣಾಂಗಣ!' ಸಚಿತ್ರ ಬರಹ ಉದಾಹರಣೆಯಾಗಿದೆ.

–ಪಿ.ಎನ್.ಶ್ರೀವತ್ಸ, ಶ್ರೀನಾಥ ಕೊನೇಟಿ, ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### 'ಗಿರಿಜಾ ಕಲ್ಯಾಣ' ನಿರೀಕ್ಷೆ

ಹರಿಹರ ಮಹಾಕವಿಯ 'ಗಿರಿಜಾ ಕಲ್ಯಾಣ' ಪೌರಾಣಿಕ ಧಾರಾವಾಹಿ ಶೀಘ್ರದಲ್ಲೇ ಆರಂಭವಾಗಲಿದೆ ಎಂದು ಓದಿ ಸಂತಸವಾಯಿತು. ಹಳೆಗನ್ನಡ ಕಾವ್ಯಗಳಾದ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳನ್ನು ಸಚಿತ್ರ ಸಮೇತ ಸರಳ ಗದ್ಯಾನುವಾದದಲ್ಲಿ ಓದುಗರಿಗೆ ತಲುಪಿಸಿದ ಕೀರ್ತಿ 'ಸುಧಾ' ಪತ್ರಿಕೆಗೆ ಇದೆ. ಇದರ ಮುಂದುವರಿಕೆಯಾಗಿ ಇದೀಗ 'ಗಿರಿಜಾ ಕಲ್ಯಾಣ' ಸಂತಸ ತಂದಿದೆ. ಓದಲು ಉತ್ಸುಕರಾಗಿದ್ದೇವೆ.

–ರುದ್ರೇಶ್ ಬಿ.ಅದರಂಗಿ, ಕೋಲಾರ/ ನಾಗರಾಜ್ ಹೆಗ್ಗೆರೆ, ತುಮಕೂರು/ ಪಿ.ಗೋವಿಂದರಾಜು, ಬೆಂಗಳೂರು/ ಸರೋಜಮ್ಮ, ಪಿ.ಆರ್.ವೆಂಕಟೇಶ್, ಮಾಲೂರು

### ವಿಭಿನ್ನ, ಮನೋಜ್ಞ ಕಥೆ

ಸಮಾಜದ ಸ್ವಾಸ್ಥ್ಯ ಕೆಡಿಸದೆ, ಇನ್ನೊಬ್ಬರ ಬದುಕನ್ನು ಕಸಿದುಕೊಳ್ಳದ 'ಆಶಾಬಿ' ಎಂಬವಳ ಕುರಿತ ಎಸ್.ಎಸ್. ಮಠಪತಿಯವರ ಕಥೆ ವಿಭಿನ್ನವಾಗಿದೆ, ಮನೋಜ್ಞವಾಗಿದೆ.

–ಕೊಹಿಮ, ಬಸರಕೋಡು/ ಕ.ಚ.ಪಾಟೀಲ, ಬೆಂಗಳೂರು/ ಎಸ್.ನಿತ್ಯ, ಮೂಡಬಿದರೆ

### ಸೃಷ್ಟಿ ವೈಚಿತ್ರ್ಯ ಕುತೂಹಲ

ಹಲವು ಕಾಲದಿಂದ ಪ್ರಕಟವಾಗುತ್ತಿರುವ ಎನ್.ವಾಸುದೇವ್ ಅವರ 'ಪ್ರಶ್ನಾಂಕಣ'ವು ಸೃಷ್ಟಿ ವೈಚಿತ್ರ್ಯಗಳ ಬಗ್ಗೆ ಕುತೂಹಲ ಮೂಡಿಸಿ ನಮ್ಮ ಜ್ಞಾನದ ಅರಿವನ್ನು ವಿಸ್ತರಿಸುತ್ತಿದೆ.

– ಕೇಶವ ಪ್ರಭು, ಶಿವಮೊಗ್ಗ